Tr Order

# ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

## ಯಾಂತ್ರಿಕ ಇಲಾಖೆ, ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ-30

ಸಂಖ್ಯೆ:.ವಾಕರಸಾ:ಕೇಕ:ಹು:ಯಾಂ:ಆಡಳಿತ: 193 :2024 ದಿನಾಂಕ: 05/02/2024

**ತಾಂತ್ರಿಕ ಸಿಬ್ಬಂದಿ ಆದೇಶ ಸಂಖ್ಯೆ : 93 /2024**

**ಉಲ್ಲೇಖ :** 1) ಸಂ:ವಾಕರಸಾ:ಕೇಕ:ಹು:ಸಿಬ್ಬಂದಿ:ಎ-14:1257:2022 ದಿ.20-07-2022
2) ಸೂಕ್ತಾಧಿಕಾರಿಗಳ ಆದೇಶ ದಿನಾಂಕ. 05-02-2024

****

ಸಕ್ಷಮ ಪ್ರಾಧಿಕಾರಿಗಳ ಆದೇಶದನ್ವಯ, ಈ ಕೆಳಕಂಡ ತಾಂತ್ರಿಕ ಸಿಬ್ಬಂದಿಯ ಕೋರಿಕೆ ಕಾರಣದ ಮೇರೆಗೆ ಅವರ ಹೆಸರಿನ ಮುಂದೆ ಸೂಚಿಸಿದ ವಿಭಾಗ/ಘಟಕಕ್ಕೆ ವರ್ಗಾಯಿಸಲಾಗಿದೆ.

| ಕ್ರ. ಸಂ | ತಾಂತ್ರಿಕ ಸಿಬ್ಬಂದಿ ಹೆಸರು (ಶ್ರೀಯುತರು) | ಹುದ್ದೆ | ಪ್ರಸ್ತುತ ಕಾರ್ಯಸ್ಥಳ ವಿಭಾಗ | ವರ್ಗಾಯಿಸಿ ನಿಯೋಜಿಸಿದ ವಿಭಾಗ |
|---|---|---|---|---|
| 1 | ಶ್ರೀ ಮಹಮದ್ ಆರಿಫ್ ಶಾ ಪಿರೋಜಿ | ಸಕುಕ | ಪ್ರಾ.ಕಾ.ಹುಬ್ಬಳ್ಳಿ | ಬಾಗಲಕೋಟೆ ವಿಭಾಗ ಬೀಳಗಿ ಘಟಕ |

ಮೇಲೆ ವಿವರಿಸಿದ ತಾಂತ್ರಿಕ ಸಿಬ್ಬಂದಿಯನ್ನು ದಿನಾಂಕ. **12/02/2024 ರ ಅಪರಾಹ್ನದಿಂದ ಹಾರಿಗೆ ಬರುವಂತೆ ಪ್ರಭಾವಕಾರಿಯಾಗಿ ಬಿಡುಗಡೆಗೊಳಿಸಲಾಗಿದೆ.** ಸದರಿಯವರ ವರ್ಗಾವಣೆಯನ್ನು ಅವರ ಕೋರಿಕೆ ಮೇರೆಗೆ ಆದೇಶಿಸಿರುವುದರಿಂದ ಸಂಸ್ಥೆಯ ನಿಯಮಾವಳಿಯಂತೆ 02 ದಿನ ಸೇರ್ಪಡೆ ಕಾಲಾವಕಾಶಕ್ಕೆ ಮಾತ್ರ ಅರ್ಹರಿದ್ದು, ಇನ್ನಿತರೆ ಯಾವುದೇ ವರ್ಗಾವಣೆ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲಾ.

ವರ್ಗಾವಣೆಗೊಂಡ ಸಿಬ್ಬಂದಿಯನ್ನು ಕೂಡಲೇ ಬಿಡುಗಡೆಗೊಳಿಸಿ ಈ ಕೆಳಗಿನ ಷರತ್ತು ಮತ್ತು ನಿಬಂಧನೆಗಳನ್ವಯ ಅನುಸರಣಾ ವರದಿಯನ್ನು ಈ ಕಛೇರಿಗೆ ಕಳುಹಿಸುವುದು.

ಸದರಿ ಸಿಬ್ಬಂದಿಯನ್ನು ಬಿಡುಗಡೆಗೊಳಿಸುವ ಸಮಯದಲ್ಲಿ ಉಲ್ಲೇಖ-1 ರನ್ವಯ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳು ಈ ಕೆಳಗಿನಂತಿವೆ.

1) ಕೋರಿಕೆಯ ಮೇರೆಗೆ ವರ್ಗಾಯಿಸುವ ಸ್ಥಳದಲ್ಲಿ ಪ್ರತಿ ತಿಂಗಳು ಕನಿಷ್ಟ 22ದಿನ ಹಾಜರಾತಿಯೊಂದಿಗೆ ಕೆಲಸ ನಿರ್ವಹಿಸುವುದು.

2) ಯಾವುದೇ ದೀರ್ಘಾವದಿ ಗೈರು ಹಾಜರಾತಿ ಮತ್ತು ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವಂತಿಲ್ಲ.

3) ಉದ್ಯೋಗಿಯನ್ನು ಕೋರಿದ ವಿಭಾಗಕ್ಕೆ ವರ್ಗಾಯಿಸಿರುವುದರಿಂದ ಅವರು ಪುನ: 3 ವರ್ಷಗೊಳಗಾಗಿ ಯಾವುದೇ ರೀತಿಯ ಕೋರಿಕೆ ವರ್ಗಾವಣೆ ಮನವಿಯನ್ನು ಸಲ್ಲಿಸುವಂತಿಲ್ಲ.

4) ಸಂಸ್ಥೆಯ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಉದ್ಯೋಗಿಯ ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಿದ್ದು, ಈ ಸದುದ್ದೇಶವನ್ನು ಅವರು ತಮ್ಮ ಸೇವೆಯಲ್ಲಿ ಸಮರ್ಪಕವಾಗಿ ಉಪಯೋಗಿಸಿಕೊಂಡು ಸಾರ್ವಜನಿಕರಿಗೆ ಸಮರ್ಪಕ ಸಾರಿಗೆ ಸೇವೆ / ಸೌಲಭ್ಯ ಒದಗಿಸುವಲ್ಲಿ ಶ್ರಮಿಸುವುದು.

5) ಸಂಸ್ಥೆಯ ಮೇಲ್ಕಂಡಂತೆ ವಿಧಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಸಂಸ್ಥೆಯು ಅವರನ್ನು ಯಾವುದೇ ವಿಭಾಗದ ಯಾವುದೇ ಘಟಕಕ್ಕೆ ವರ್ಗಾಯಿಸುವ ಹಕ್ಕನ್ನು ಹೊಂದಿರುತ್ತದೆ.

2 ನೇ ಪುಟಕ್ಕೆ

ಈ ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಉದ್ಯೋಗಿಯ ಸಂಪೂರ್ಣ ಒಪ್ಪಿಗೆ ಇರುವುದರ ಕುರಿತು ಅವರಿಂದ ಕಡ್ಡಾಯವಾಗಿ ದೃಢೀಕರಣ ಪತ್ರ ಪಡೆದ ನಂತರ ಬಿಡುಗಡೆಗೊಳಿಸಲು ಕ್ರಮ ಜರುಗಿಸತಕ್ಕದ್ದು. ಸದರಿ ವರ್ಗಾವಣೆಗೊಂಡ ಸಿಬ್ಬಂದಿಗಳು ವರ್ಗಾವಣೆಗೊಳಿಸಿದ ವಿಭಾಗದಲ್ಲಿ ಹಾಜರಾದ ನಂತರ ಉದ್ಯೋಗಿಗಳು ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದೇ ಇದ್ದಲ್ಲಿ ಅಂತಹ ಉದ್ಯೋಗಿಗಳ ವಿವರಗಳನ್ನು ದಾಖಲೆಗಳೊಂದಿಗೆ ದೃಢೀಕರಿಸಿ ಈ ಕಛೇರಿಗೆ ಕಳುಹಿಸುವುದು.

ಮುಖ್ಯ ಯಾಂತ್ರಿಕ ಅಭಿಯಂತರರು

ರಿಗೆ,

ಮೇಲ್ಕಂಡ ಸಿಬ್ಬಂದಿಗೆ

**(ಸಂಬಂಧಪಟ್ಟ ಅಧಿಕಾರಿಗಳ ಮುಖಾಂತರ)**

**ಪ್ರತಿಯನ್ನು:**

1) ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಾಕರಸಾಸಂಸ್ಥೆ, ಬಾಗಲಕೋಟೆ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

2) ಕಾರ್ಯವ್ಯವಸ್ಥಾಪಕರು, ವಾಕರಸಾ ಸಂಸ್ಥೆ, ಪ್ರಾ. ಕಾ. ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

3) ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು/ಮುಖ್ಯ ಲೆಕ್ಕಾಧಿಕಾರಿಗಳು ವಾಕರಸಾ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ರವಾನಿಸಿದೆ.

3) ಮುಖ್ಯ ಸಂಚಾರ ವ್ಯವಸ್ಥಾಪಕರು, ವಾಕರಸಾಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ **ಸದರಿ ಆದೇಶವನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.**

4) ಎಲ್ಲಾ ಇಲಾಖಾ ಮುಖ್ಯಸ್ಥರು, ವಾಕರಸಾ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.

5) ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರ ಆಪ್ತ ಕಾರ್ಯದರ್ಶಿಗಳು, ವಾಕರಸಾ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.

6) ಕಛೇರಿಯ ಕಡತಕ್ಕೆ.